# JAIN COLLEGE

463/465, 18th Main Road, SS Royal, 80 Feet Road
Rajarajeshwari Nagar, Bangalore - 560 098

***SUBJECT: KANNADA***

***II PUC***
***MOCK - I***

***Timings Allowed: 3 Hrs 15 Minutes*** ***Total Marks: 100***

---

**ಸೂಚನೆಗಳು**

- **ಒಂದು ವಾಕ್ಯದ ಎಲ್ಲಾ ಪ್ರಶ್ನೆಗಳಿಗೂ ಕಡ್ಡಾಯವಾಗಿ ಉತ್ತರಿಸಿ.**
- **ಪ್ರತಿಯೊಂದು ವಿಭಾಗದಲ್ಲಿ ನೀಡಲಾಗಿರುವ ಆಯ್ಕೆಗಳಿಗೆ ಅನುಗುಣವಾಗಿ ಉತ್ತರಿಸಿ.**
- **ಹೆಚ್ಚುವರಿ ಪ್ರಶ್ನೋತ್ತರಗಳನ್ನು ಬರೆಯದಂತೆ ಗಮನವಹಿಸಿ**
- **ಪ್ರಶ್ನೆಗಳ ಸಂಖ್ಯೆಯನ್ನು ಸರಿಯಾದ ರೀತಿಯಲ್ಲಿ ತಪ್ಪದೆ ಬರೆಯಿರಿ.**

**I ಒಂದು ವಾಕ್ಯದಲ್ಲಿ ಉತ್ತರಿಸಿ.** **10X1=10**

1. ರಾವಣನ ಎದುರು ಪ್ರತ್ಯಕ್ಷವಾದ ವಿದ್ಯಾದೇವತೆ ಯಾರು?
2. ಜಾಲಿಯ ಮುಳ್ಳು ಹೇಗೆ ಆವರಿಸಿರುತ್ತದೆ?
3. ಮುದುಕಿಯು ಏನೆಂದು ಹರಕೆ ಹೊತ್ತಳು?
4. ಜನರಿಗೆ ಯಾವುದಕ್ಕೆ ಗತಿಯಿಲ್ಲ?
5. ಸ್ಥಳೀಯ ಭಾಷೆ ಕಲಿಯದ ಅನ್ಯಭಾಷಿಕರು ಏನಾಗುತ್ತಾರೆ?
6. ಧಣಿಗಳ ಮನೆಯ ಪಕ್ಕದಲ್ಲಿ ಯಾವ ಹೊಳೆ ಹರಿಯುತ್ತಿತ್ತು?
7. ಕಲಿಯುಗದ ಅಮೃತ ಯಾವುದು?
8. ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು?
9. ಪೋಸ್ಟ್‌ಮನ್ ಜಬ್ಬಾರನಿಗೆ ಒದಗಿದ ತೊಂದರೆ ಯಾವುದು?
10. ಕೃಷ್ಣೇಗೌಡರ ಆನೆಯ ಹೆಸರೇನು?

**II ಅ. ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.** ***4X2=8***

11. ತಾನು ಘೋರತರ ವಿಷ ಕುಡಿಯುವುದಾಗಿ ದ್ರೌಪದಿ ಏಕೆ ಹೇಳುತ್ತಾಳೆ?
12. ಧನ ಮತ್ತು ಸುತನ ವಿಷಯದಲ್ಲಿ ಸೋಮನಾಥನ ಅಭಿಪ್ರಾಯವೇನು?
13. ಮುಂಬೈನ ಅವಸರದ ಜೀವನ ಚಿತ್ರಕ್ಕೆ ಎರಡು ಉದಾಹರಣೆ ಕೊಡಿ.
14. ಶಿಲುಬೇಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?
15. ಆತ್ಮಕ್ಕೆ ಕಮಟು ಹತ್ತುವುದು ಎಂದರೇನು?

**ಆ. ಕೆಳಗಿನ ಪ್ರಶ್ನೆಗಳಲ್ಲಿ ಮೂರಕ್ಕೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.** **3X2=6**

16. ಕೊನೆಯಲ್ಲಿ ಬಸಲಿಂಗನಿಗೆ ಏನೆಂದು ನಿಶ್ಚಿತವಾಗತೊಡಗಿತ್ತು?
17. ಮಾರ್ಷ್‌ನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?
18. ಸೀತಾಳ ಬಯಕೆ, ನಂಬಿಕೆಗಳು ಹೇಗಿದ್ದವು?
19. ಕಲಾಂ ಅವರ ಬದುಕಿನ ಮಂತ್ರ ಯಾವುದು?

**ಇ. ಕೆಳಗಿನ ಪ್ರಶ್ನೆಗಳಲ್ಲಿ ಮೂರಕ್ಕೆ ಮಾತ್ರ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.** **3X2=6**

20. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?
21. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?
22. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?
23. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?

III ಅ. ಕೆಳಗಿನ ಯಾವುದಾದರು ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸ್ವಾರಸ್ಯ ಬರೆಯಿರಿ. 2X3=6

24. ಪುಷ್ಪವಿಲ್ಲದೆ ಪರಿಮಳವನರಿಯಬಹುದೆ
25. ಕೂಳುಗೇಡಿಂಗೊಡಲ ಹೊರುವಿರಿ
26. ತುಂಬಿರುವ ತನಕ ತುಂತುಂಬಿ ಕುಡಿಯಬೇಕು.

ಆ. ಕೆಳಗಿನ ಯಾವುದಾದರೂ <u>ಒಂದು</u> ವಾಕ್ಯವನ್ನು ಕುರಿತು ಸಂದರ್ಭ ಸ್ವಾರಸ್ಯ ಬರೆಯಿರಿ. 1X3=3

27. ಅವನು ನನ್ನಷ್ಟೇ ಒಳ್ಳೆಯ ಡಾಕ್ಟರ್, ಏನೂ ತಪ್ಪು ತಿಳಿಯಬೇಡ
28. ಪಾವಕ್ಕಿ ಕಮ್ಮಿ ಮಾಡಿದರೆ ಸುಮ್ಮನೆ ಇರ್ತಿಯೇನೋ ನೀನು?

ಇ. ಕೆಳಗಿನ ಯಾವುದಾದರು <u>ಒಂದು</u> ವಾಕ್ಯವನ್ನು ಕುರಿತು ಸಂದರ್ಭ ಸ್ವಾರಸ್ಯ ಬರೆಯಿರಿ. 1X3=3

29. ನಮ್ಮ ಕಡೆ ಕೆಮ್ಮು ಕಾಲಿಂಗ್ ಬೆಲ್ ಇದ್ದ ಹಾಗೆ.
30. ನಂಗೇನು ಈ ನಾಯಿಗಳನ್ನ ಕಂಡರೆ ಪ್ರೀತಿನಾ ಸ್ವಾಮಿ।

IV ಅ. ಕೆಳಗಿನ ಯಾವುದಾದರು <u>ಮೂರು</u> ಪ್ರಶ್ನೆಗಳಿಗೆ ಐದಾರು ವಾಕ್ಯದಲ್ಲಿ ಉತ್ತರಿಸಿ. 3X4=12

31. ರಾವಣನಲ್ಲಿ ಕಂಡುಬರುವ ಪಶ್ಚಾತ್ತಾಪವನ್ನು ಕವಿ ಹೇಗೆ ನಿರೂಪಿಸಿದ್ದಾನೆ?
32. ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತದ ನುಡಿಗಳಾವುವು?
33. 'ಬೆಳಗು ಜಾವ' ಕವನದ ಮೂಲಕ ಕವಿ ಬೇಂದ್ರೆ ಹೇಳಿರುವ ವಿಚಾರಗಳಾವುವು?
34. 'ಮುಂಬೈ ಜಾತಕ'ದಲ್ಲಿ ಮಕ್ಕಳ ಬಾಲ್ಯದ ಚಿತ್ರಣ ಹೇಗೆ ನಿರೂಪಿತವಾಗಿದೆ?

ಆ. ಕೆಳಗಿನ ಯಾವುದಾದರು ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯದಲ್ಲಿ ಉತ್ತರಿಸಿ. 2X4=8

35. ಕನ್ನಡಿಗರೆನ್ನಿಕೊಳ್ಳಲು ಯಾವ ಯೋಗ್ಯತೆಯ ಪ್ರಶ್ನೆಗಳು ನಮ್ಮನ್ನು ಚುಚ್ಚಬೇಕು? ವಿವರಿಸಿ.
36. ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಹೇಗೆ? ವಿವರಿಸಿ.
37. ಎಂತಹ ತಿರುಳು ಕನ್ನಡದಲ್ಲಿ ಕತೆಯನ್ನು ಹೇಳುವುದಾಗಿ ಮುದ್ದಣ ಹೇಳುವನು?

ಇ. ಕೆಳಗಿನ ಯಾವುದಾದರು <u>ಎರಡು</u> ಪ್ರಶ್ನೆಗಳಿಗೆ ಐದಾರು ವಾಕ್ಯದಲ್ಲಿ ಉತ್ತರಿಸಿ. 2X4=8

38. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.
39. ಎಲ್ಲರ ನಿರೀಕ್ಷೆ ಸುಳ್ಳಾಗುವಂತೆ ಕೃಷ್ಣೇಗೌಡ ಆನೆಯನ್ನು ಹೇಗೆ ಸಾಕಿದನು?
40. ಆನೆಯು ಇಲ್ಲಿ ಬಾಯಿಲ್ಲದ ಜನರ ಸಂಕೇತವಾಗಿರುವುದನ್ನು ವಿಶ್ಲೇಷಿಸಿ.

V ಅ. ಕೆಳಗಿನ ಯಾವುದಾದರು <u>ಒಂದು</u> ಪದ್ಯದ ಭಾವಾರ್ಥ ಬರೆಯಿರಿ. 1X5-5

41.ಕದಡಿದ ಸಲಿಲಂ ತಿಳಿವಂ
ದದೆ ತನ್ನಿಂ ತಾನೆ ತಿಳಿದ ದಶವದನಂಗಾ
ದುದು ವೈರಾಗ್ಯಂ ಸೀತೆಯೊ
ಳುದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ

**ಅಥವಾ**

42.ಎಲ್ಲರೊಳು ಕಲಿಭೀಮನೇ ಮಿಡು
ಕುಳ್ಳ ಗಂಡನು ಹಾನಿ ಹರಿಬಕೆ
ನಿಲ್ಲದಂಗೈಸುವನು ಕಡು ಹೀಹಾಳಿಯುಳ್ಳವನು
ಖುಲ್ಲನಿವನುಪಟಳವನಾತಂ
ಗೆಲ್ಲವನು ಹೇಳುವೆನು ಬಳಿಕವ
ನಲ್ಲಿ ಹುರುಳಿಲ್ಲದೊಡೆ ಕುಡಿವೆನು ಘೋರತರ ವಿಷವ

VI ಭಾಷಾಭ್ಯಾಸ

ಅ. ಕೆಳಗಿನ <u>ಆರು</u> ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. 2X6=12

43. ಪದಗಳ ಅರ್ಥ ಬರೆಯಿರಿ :ಕೃತಾಂತಜಿಹ್ವೆ, ಎಚ್ಚಾಳುತನ
44. ವಿಭಕ್ತಿ ಪ್ರತ್ಯಯ ಬರೆಯಿರಿ :ಮನೆಯಿಂದ, ಆಸ್ಪತ್ರೆಗೆ
45. ಕ್ರಿಯಾಪದದ ಧಾತು ಬರೆಯಿರಿ :ತಿಕ್ಕುವೆನು, ಬಂದಳು

46. ನಾನಾರ್ಥ ಬರೆಯಿರಿ :ಬಗೆ, ರಾಗ

47. ತದ್ಭವ ಬರೆಯಿರಿ :ಘೂಕ, ಧರಾ

48. ಗುಣವಾಚಕ ಬರೆಯಿರಿ :ನಳಿನಾನನೆ, ದೊಡ್ಡಮರ

49. ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ – ತಲೆಬಾಗು, ಕಣ್ಣುಕೆಂಪಗಾಗು

**ಇ. ಈ ಕೆಳಗಿನ ಯಾವುದಾದರು ಒಂದನ್ನು ಕುರಿತು ಪ್ರಬಂಧ ಬರೆಯಿರಿ. 1X5=5**

50. ತ್ಯಾಜ್ಯ ವಸ್ತುಗಳ ಪುನರ್ಬಳಕೆ

51. ಮಾತೃಭಾಷೆಯಲ್ಲಿ ಶಿಕ್ಷಣ

**ಈ. ಕೆಳಗಿನವುಗಳಲ್ಲಿ ಒಂದಕ್ಕೆ ಉತ್ತರಿಸಿ. 1X4=4**

52. ಕನ್ನಡ ನಾಡುನುಡಿಯ ಅಭಿಮಾನವನ್ನು ಕುರಿತು ನಿಮ್ಮ ಗೆಳೆಯರಿಗೊಂದು ಪತ್ರ ಬರೆಯಿರಿ.

**ಅಥವಾ**

53.ಸಮರ್ಪಕ ವಿದ್ಯುತ್ ಪೂರೈಕೆಗಾಗಿ ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ಪತ್ರವೊಂದನ್ನು ಬರೆಯಿರಿ.

**ಉ. ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ. 1X4=4**

54.ಸಂತೆಯ ಹೊತ್ತಿಗೆ ಮೂರು ಮೊಳ ನೇಯ್ದಂತೆ.

55.ತುಂಬಿದ ಕೊಡ ತುಳುಕುವುದಿಲ್ಲ.

********************************